# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 976 |
| ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25-08-2026 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಬಿತ್ತನೆಗೆ ನಿಗದಿಪಡಿಸಿದ್ದ ಒಟ್ಟು ಗುರಿ ಎಷ್ಟು; ಆ ಪೈಕಿ ಜೂನ್ ಮೂರನೇ ವಾರದ ಅಂತ್ಯಕ್ಕೆ ಕೇವಲ 28,900 ಹೆಕ್ಟೇರ್‌ನಷ್ಟು ಮಾತ್ರ ಬಿತ್ತನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಒಟ್ಟು 84.10 ಲಕ್ಷ ಹೆಕ್ಟೇರ್ ನಷ್ಟು ಬಿತ್ತನೆ ಗುರಿಯನ್ನು ನಿಗದಿಪಡಿಸಲಾಗಿದೆ.<br><br>ಈ ಪೈಕಿ ಜೂನ್ ಮೂರನೇ ವಾರದ ಅಂತ್ಯಕ್ಕೆ 25.40 ಲಕ್ಷ ಹೆಕ್ಟೇರ್ ನಷ್ಟು ಬಿತ್ತನೆಯಾಗಿರುತ್ತದೆ. ಮುಂದುವರೆದು, ಪ್ರಸ್ತುತ ಆಗಸ್ಟ್ ಮೂರನೇ ವಾರದ ಅಂತ್ಯಕ್ಕೆ 58.23 ಲಕ್ಷ ಹೆಕ್ಟೇರ್ ಬಿತ್ತನೆಯಾಗಿರುತ್ತದೆ. |
| ಆ) | ಮಳೆ ಅಭಾವದಿಂದ ಬಿತ್ತನೆ ಗುರಿಯಲ್ಲಿ ಶೇ.20 ರಷ್ಟು ಮಾತ್ರ ಸಾಧನೆಯಾಗಲು ಕಾರಣವೇನು; ಇದರಿಂದ ರೈತರಲ್ಲಿ ಎದುರಾಗಿರುವ ಬರಗಾಲದ ಭೀತಿ ನಿವಾರಿಸಲು ಕೈಗೊಂಡಿರುವ ತುರ್ತು ಕ್ರಮಗಳೇನು; | ಕೃಷಿ ಇಲಾಖೆ:<br><br>ಈ ವರ್ಷ ನೈರುತ್ಯ ಮಾರುತದಲ್ಲಿ(ಜೂನ್ 1 ರಿಂದ ಆಗಸ್ಟ್ 20 ರವರೆಗೆ) ವಾಡಿಕೆ ಮಳೆ 629 ಮಿ.ಮೀ ಗೆ ಪ್ರತಿಯಾಗಿ 435 ಮಿ.ಮೀ. ಮಳೆಯಾಗಿರುತ್ತದೆ. ಇದು ಶೇ.(-)31 ರಷ್ಟು ಮಳೆ ಕಡಿಮೆಯಾಗಿರುತ್ತದೆ.<br><br>2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಒಟ್ಟು 84.10 ಲಕ್ಷ ಹೆಕ್ಟೇರ್ ನಷ್ಟು ಬಿತ್ತನೆ ಗುರಿಗೆ ಪ್ರತಿಯಾಗಿ ದಿನಾಂಕ:14.08.2026ರವರೆಗೆ 58.23 ಲಕ್ಷ ಹೆಕ್ಟೇರ್ (69%) ರಷ್ಟು ಬಿತ್ತನೆಯಾಗಿರುತ್ತದೆ.<br><br>ಬರಗಾಲದ ಪರಿಸ್ಥಿತಿ ನಿವಾರಿಸಲು ಇಲಾಖಾವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>• ತಾಲ್ಲೂಕುವಾರು ಪರ್ಯಾಯ ಬೆಳೆ ಯೋಜನೆ ಸಿದ್ಧಪಡಿಸಿ ಕ್ರಮ ಕೈಗೊಳ್ಳಲಾಗಿದೆ.<br>• ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (PMFBY) ಅಡಿಯಲ್ಲಿ ಸಕ್ರಿಯ ನೋಂದಣಿಗೆ ಪ್ರಚಾರ ಕೈಗೊಳ್ಳಲಾಗಿದೆ. |

| | | |
|---|---|---|
| | | • ಕೃಷಿ ಭಾಗ್ಯ ಯೋಜನೆಯ ಅನುಷ್ಠಾನ.<br>• ಸಾವಯವ ಕೃಷಿ, ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯ ಹಾಗೂ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ (DAP) ಕುರಿತು ಜಾಗೃತಿ.<br>ಕಂದಾಯ ಇಲಾಖೆ:<br><br>'ಬರ ನಿರ್ವಹಣಾ ಕೈಪಿಡಿ 2020' ರಲ್ಲಿ (Manual for Drought Management 2020) ನೀಡಿರುವ ಮಾರ್ಗಸೂಚಿಗಳಂತೆ ಬರ ಮೌಲ್ಯಮಾಪನ ಮತ್ತು ಘೋಷಣೆಗೆ ವಸ್ತುನಿಷ್ಠ, ಪಾರದರ್ಶಕ ಮತ್ತು ಸಾಕ್ಷ್ಯ ಆಧಾರಿತ ವಿಧಾನವನ್ನು ಅನುಸರಿಸಿ ಕಡ್ಡಾಯ ಸೂಚಕಗಳಾದ ಮಳೆ ಕೊರತೆ ಅಥವಾ ಒಣಹವೆ, ಬಿತ್ತನೆ ಪ್ರಗತಿ, ಉಪಗ್ರಹ ಆಧಾರಿತ ರಿಮೋಟ್ ಸೆನ್ಸಿಂಗ್-ಆಧಾರಿತ ಸಸ್ಯವರ್ಗದ ಸೂಚ್ಯಂಕಗಳು, ಮಣ್ಣಿನ ತೇವಾಂಶ ಸೂಚ್ಯಂಕಗಳು ಮತ್ತು ಜಲವಿಜ್ಞಾನದ ಸೂಚಕಗಳ ಅಧ್ಯಯನ ನಡೆಸಿ ಮೊಬೈಲ್ ಆ್ಯಪ್ ಬಳಸಿ ಸ್ಥಳ ಪರಿಶೀಲನೆ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. ದಿನಾಂಕ:14.08.2026 ರಂದು ಹೊರಡಿಸಲಾಗಿರುತ್ತದೆ. ಅಧಿಸೂಚನೆಯನ್ನು ಅಧಿಸೂಚನೆಯ ಪ್ರತಿಯನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.<br><br>ಸದರಿ ಅಧಿಸೂಚನೆಯಲ್ಲಿ ತಿಳಿಸಿರುವಂತೆ 'ಬರ ನಿರ್ವಹಣಾ ಕೈಪಿಡಿ 2020' ರಲ್ಲಿ ನಿಗದಿಪಡಿಸಲಾದ ಬರ ಮಾನದಂಡಗಳ ಪ್ರಕಾರ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC) ಸಂಸ್ಥೆಯು ವೈಜ್ಞಾನಿಕ ಮೌಲ್ಯಮಾಪನವನ್ನು ಕೈಗೊಂಡು, ಜೂನ್ 1 ರಿಂದ ಆಗಸ್ಟ್ 12 ರವರೆಗಿನ ಅವಧಿಯ ಮೌಲ್ಯಮಾಪನ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದು, ಅದರಂತೆ **ಪ್ರಸ್ತುತ ರಾಜ್ಯದ 25 ಜಿಲ್ಲೆಗಳ ಒಟ್ಟು 102 ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳೆಂದು ಸರ್ಕಾರದಿಂದ ಘೋಷಣೆ ಮಾಡಲು ಅರ್ಹತೆ ಪಡೆದಿರುತ್ತವೆ.** ಸದರಿ ವೈಜ್ಞಾನಿಕ ಮೌಲ್ಯಮಾಪನ ಕಾರ್ಯವು ನಿರಂತರ ಪ್ರಕ್ರಿಯೆಯಾಗಿದ್ದು, 2026 ರ ಮುಂಗಾರು ಹಂಗಾಮಿನ ಅಂತ್ಯದವರೆಗೆ ಮುಂದಿನ ಸಾಪ್ತಾಹಿಕ ಮೌಲ್ಯಮಾಪನಗಳ ಆಧಾರದ ಮೇಲೆ ಅರ್ಹತೆ ಪಡೆಯುವ ತಾಲ್ಲೂಕುಗಳಲ್ಲಿ Ground Truthing ಪ್ರಕ್ರಿಯೆಯನ್ನು ಕೈಗೊಂಡು ಬರಪೀಡಿತ ತಾಲ್ಲೂಕುಗಳ ಘೋಷಣೆಯ ಬಗ್ಗೆ ಸರ್ಕಾರದಿಂದ ಕ್ರಮ ವಹಿಸಲಾಗುವುದು. |

| | | |
|---|---|---|
| ಇ) | ರಾಜ್ಯದಲ್ಲಿ ತೀವ್ರ ಹಾಗೂ ಸಾಮಾನ್ಯ ಮಳೆ ಕೊರತೆ ಎದುರಿಸುತ್ತಿರುವ ಹೋಬಳಿಗಳ ಸಂಖ್ಯೆ ಎಷ್ಟು; ಈ ಭಾಗದ ರೈತರಿಗೆ ಪರ್ಯಾಯ ಬೆಳೆಗಳ ಬಿತ್ತನೆ ಬೀಜ ಹಾಗೂ ರಸಗೊಬ್ಬರ ವಿತರಣೆಗೆ ಸರ್ಕಾರ ಮಾಡಿಕೊಂಡಿರುವ ಸಿದ್ಧತೆಗಳೇನು; | ರಾಜ್ಯದಲ್ಲಿ ನೈರುತ್ಯ ಮುಂಗಾರು ಅವಧಿಯಲ್ಲಿ (ಜೂನ್ 1 ರಿಂದ ಆಗಸ್ಟ 20 ರವರೆಗೆ) ದಾಖಲಾಗಿರುವ ಮಳೆಯ ಪ್ರಮಾಣದ ಆಧಾರದ ಮೇಲೆ, 101 ಹೋಬಳಿಗಳು ತೀವ್ರ ಮಳೆ ಕೊರತೆ ಹಾಗೂ 572 ಹೋಬಳಿಗಳು ಸಾಮಾನ್ಯ ಮಳೆ ಕೊರತೆ ಘಟಕದಡಿ ವರದಿಯಾಗಿರುತ್ತವೆ.<br><br>**ಪರ್ಯಾಯ ಬೆಳೆ ಯೋಜನೆ:**<br><br>ಮಳೆ ಕೊರತೆಯಿಂದಾಗಿ ರೈತರಿಗೆ ತೊಂದರೆಯಾಗದಂತೆ ಕೃಷಿ ಇಲಾಖೆಯು ಪರ್ಯಾಯ ಬೆಳೆ ಹಾಗೂ ಬೆಳೆ ಪರಿವರ್ತನೆಗಾಗಿ ತುರ್ತು ಕಾರ್ಯಯೋಜನೆಯನ್ನು ಸಿದ್ಧಪಡಿಸಿದೆ. ಜಿಲ್ಲೆ ಮತ್ತು ಕೃಷಿ-ಹವಾಮಾನ ವಲಯಕ್ಕೆ ಅನುಗುಣವಾಗಿ ಕಡಿಮೆ ಅವಧಿಯಲ್ಲಿ ಕಟಾವಿಗೆ ಬರುವ ಹಾಗೂ ಕಡಿಮೆ ನೀರಿನ ಅವಶ್ಯಕತೆ ಇರುವ ಬೆಳೆಗಳಿಗೆ ಆದ್ಯತೆ ನೀಡುವ ಮಾಹಿತಿಯನ್ನು ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ನೀಡಲಾಗಿದೆ..<br><br>**ಬಿತ್ತನೆ ಬೀಜದ ಸಿದ್ಧತೆ:**<br><br>ಮಳೆ ಕೊರತೆಯಿರುವ ಪ್ರದೇಶಗಳಿಗೆ ಸೂಕ್ತವಾದ ಪರ್ಯಾಯ ಬೆಳೆಗಳ ಪ್ರಮಾಣೀಕೃತ ಹಾಗೂ ಕಡಿಮೆ ಅವಧಿಯ ತಳಿಗಳ ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ಸಾಧ್ಯವಾದಷ್ಟು ಮಟ್ಟಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ.<br><br>2026ರ ಮುಂಗಾರು ಹಂಗಾಮಿಗೆ 4.86 ಲಕ್ಷ ಕ್ವಿಂ. ಬಿತ್ತನೆ ಬೀಜಗಳ ಬೇಡಿಕೆಗೆ, 5.97 ಲಕ್ಷ ಕ್ವಿಂ. ಬಿತ್ತನೆ ಬೀಜಗಳು ಲಭ್ಯವಿದ್ದು, ದಿನಾಂಕ: 20.08.2026 ರವರೆಗೆ 2.93 ಲಕ್ಷ ಕ್ವಿಂಟಾಲ್ ಗಳಷ್ಟು ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗಿದ್ದು, 43586 ಕ್ವಿಂಟಾಲ್ ಗಳಷ್ಟು ದಾಸ್ತಾನು ಇರುತ್ತದೆ. ಬೀಜೋತ್ಪಾದನಾ ಸಂಸ್ಥೆಗಳಲ್ಲಿ ಉಳಿದ ಬಿತ್ತನೆ ಬೀಜದ ದಾಸ್ತಾನು ಇರುತ್ತದೆ. ಜಿಲ್ಲೆಗಳ ಬೇಡಿಕೆಯನ್ವಯ consignment ಆಧಾರದ ಮೇರೆಗೆ ಕರ್ನಾಟಕ ರಾಜ್ಯ ಬೀಜ ನಿಗಮ ನಿ ಮತ್ತು ಇತರೆ ಸರಬರಾಜು ಸಂಸ್ಥೆಗಳಿಂದ ದಾಸ್ತಾನು ಪಡೆದು ಬೀಜಗಳನ್ನು ಪೂರೈಸಲು ವ್ಯವಸ್ಥೆ ಮಾಡಲಾಗಿದೆ.<br><br>**ರಸಗೊಬ್ಬರ:**<br><br>2026ನೇ ಸಾಲಿನ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಒಟ್ಟು 30.05 ಲಕ್ಷ ಮೆ. ಟನ್ ವಿವಿಧ |

| | | |
|---|---|---|
| | | ಗ್ರೇಡ್‌ನ ರಸಗೊಬ್ಬರಗಳ ಹಂಚಿಕೆಯಾಗಿರುತ್ತದೆ (ಯೂರಿಯಾ-11.10 ಲಕ್ಷ ಮೆ.ಟನ್, ಡಿ.ಎ.ಪಿ.-4.00 ಲಕ್ಷ ಮೆ. ಟನ್, ಎಂ.ಒ. ಪಿ-2.12 ಲಕ್ಷ ಮೆ. ಟನ್, ಕಾಂಪ್ಲೆಕ್ಸ್-11.88 ಲಕ್ಷ ಮೆ. ಟನ್, ಮತ್ತು ಎಸ್. ಎಸ್. ಪಿ-0.95 ಲಕ್ಷ ಮೆ. ಟನ್).<br><br>ಆಗಸ್ಟ್-2026ರ ಮಾಹೆಯವರೆಗೆ 25.17 ಲಕ್ಷ ಮೆ.ಟನ್ ರಸಗೊಬ್ಬರದ ಬೇಡಿಕೆಗೆ, ದಿನಾಂಕ 20.08.2026 ರವರೆಗೆ ಒಟ್ಟು 31.37 ಲಕ್ಷ ಮೆ.ಟನ್ ಸರಬರಾಜಾಗಿದ್ದು(ಆರಂಭಿಕ ಶಿಲ್ಕು 11.54 ಲಕ್ಷ ಮೆ.ಟನ್ ಒಳಗೊಂಡಂತೆ), 19.13 ಲಕ್ಷ ಮೆ.ಟನ್ ಮಾರಾಟವಾಗಿ 12.24 ಲಕ್ಷ ಮೆ.ಟನ್ ವಿವಿಧ ಶ್ರೇಣಿಯ ರಸಗೊಬ್ಬರಗಳ ದಾಸ್ತಾನಿರುತ್ತದೆ.<br><br>ಮುಂಗಾರು ಹಂಗಾಮಿನ ರಸಗೊಬ್ಬರ ಬೇಡಿಕೆ, ಸರಬರಾಜು ಮತ್ತು ದಾಸ್ತಾನು ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ರಸಗೊಬ್ಬರ ತೀವ್ರ ಬೇಡಿಕೆಯ ಸಮಯದಲ್ಲಿ ರೈತರಿಗೆ ರಸಗೊಬ್ಬರವನ್ನು ಒದಗಿಸುವ ನಿಟ್ಟಿನಲ್ಲಿ ಕಾಪು ದಾಸ್ತಾನನ್ನು ನಿರ್ವಹಿಸಲಾಗುತ್ತಿದ್ದು, ದಿನಾಂಕ 18.08.2026ರಂತೆ 1.03 ಲಕ್ಷ ಮೆ.ಟನ್ ವಿವಿಧ ಗ್ರೇಡ್ ನ ರಸಗೊಬ್ಬರ ದಾಸ್ತಾನಿರುತ್ತದೆ. ಸದರಿ ಕಾಪು ದಾಸ್ತಾನಿನಿಂದ ಬೇಡಿಕೆಯನ್ನಾಧರಿಸಿ ಸಹಕಾರ ಸಂಘಗಳ ಮೂಲಕ ರೈತರಿಗೆ ವಿತರಿಸಲು ಕ್ರಮವಹಿಸಲಾಗಿದೆ.<br><br>ರಾಜ್ಯದಲ್ಲಿ ಮಳೆಯ ಕೊರತೆಯಿಂದಾಗಿ ಬಿತ್ತನೆ ಚಟುವಟಿಕೆಗಳು ಕುಂಠಿತಗೊಂಡಿದ್ದು, ಇದರಿಂದ ರಸಗೊಬ್ಬರದ ಬೇಡಿಕೆ ಕಡಿಮೆಯಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಮಾಸಿಕ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರಗಳನ್ನು ಸರಬರಾಜು ಮಾಡಲಾಗುತ್ತಿದ್ದು, ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಇರುವುದಿಲ್ಲ.<br><br>ಜಿಲ್ಲಾವಾರು ಗ್ರೇಡ್ ವಾರು ರಸಗೊಬ್ಬರದ ಬೇಡಿಕೆ, ಸರಬರಾಜು ಮತ್ತು ದಾಸ್ತಾನಿನ ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | ವಿಜಯಪುರ, ಕಲಬುರಗಿ, ಕೊಪ್ಪಳ ಸೇರಿದಂತೆ ಮಳೆ ಕೊರತೆಯಿಂದ ಬಿತ್ತನೆ ಕುಂಠಿತಗೊಂಡಿರುವ ಜಿಲ್ಲೆಗಳ ರೈತರ ನೆರವಿಗಾಗಿ ವಿಶೇಷ ಪ್ಯಾಕೇಜ್ ಅಥವಾ ಪರಿಹಾರ ಧನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ನೀಡುವುದು) | ಕೃಷಿ ಇಲಾಖೆ:<br><br>ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ರಾಜ್ಯದಲ್ಲಿ 2026 ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆಗೆ ನೋಂದಾಯಿಸಿಕೊಂಡ ರೈತರಿಗೆ ಮಳೆ ಕೊರತೆಯಿಂದ ಬಿತ್ತನೆ ಕುಂಠಿತಗೊಂಡಿರುವ ಬೆಳೆಗಳಿಗೆ ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯ ಹೊರಡಿಸಿರುವ PMFBY Operational Guidelines–2023ರನ್ವಯ ವಿಮಾ ಪರಿಹಾರ ನೀಡಲು ಈ ಕೆಳಕಂಡಂತೆ ಅವಕಾಶವಿರುತ್ತದೆ.<br><br>• Prevented Sowing/Planting: ಬೆಳೆ ಬಿತ್ತನೆ/ ನಾಟಿ ಪೂರ್ಣವಾಗಿ ವಿಫಲಗೊಂಡಲ್ಲಿ<br>• Mid-Season Adversity: ಬಿತ್ತನೆಯ ನಂತರ ಕಟಾವಿಗೆ ಮುನ್ನ ಹವಾಮಾನ ವೈಪರೀತ್ಯದಿಂದ ಬೆಳೆ ಹಾನಿಯಾದರೆ ಮಧ್ಯಂತರ ವಿಮಾ ಪರಿಹಾರ.<br><br>2026ರ ಮುಂಗಾರು ಹಂಗಾಮಿನಲ್ಲಿ Prevented Sowing/Planting (ಬಿತ್ತನೆ ವೈಫಲ್ಯ) ಅಡಿ ರಾಜ್ಯದ ಹಾಸನ, ಚಾಮರಾಜನಗರ, ತುಮಕೂರು, ಕೋಲಾರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಮೈಸೂರು, ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಒಟ್ಟು 757 ವಿಮಾ ಘಟಕಗಳಲ್ಲಿ ಬಿತ್ತನೆ ವೈಫಲ್ಯ (Prevented Sowing) invoke ಮಾಡಲಾಗಿದ್ದು, ಸದರಿ ವಿಮಾ ಘಟಕಗಳಲ್ಲಿ ಮಾರ್ಗಸೂಚಿಯನ್ವಯ ಬೆಳೆ ವಿಮೆಗೆ ನೋಂದಾಯಿಸಿದ ಎಲ್ಲಾ ರೈತ ಪ್ರಕರಣಗಳಿಗೆ ವಿಮಾ ಮೊತ್ತದ ಶೇ.25 ರಷ್ಟು ಬೆಳೆ ವಿಮೆ ಪರಿಹಾರ ಮೊತ್ತವನ್ನು ಮಂಜೂರು ಮಾಡಲಾಗುತ್ತದೆ.<br><br>Mid-Season Adversity ಅಡಿ ರಾಜ್ಯದ ಚಾಮರಾಜನಗರ, ಕೊಪ್ಪಳ, ಯಾದಗಿರಿ, ಬೀದರ್, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಒಟ್ಟು 306 ವಿಮಾ ಘಟಕಗಳಲ್ಲಿ ಮಧ್ಯಂತರ ವಿಮಾ ಪರಿಹಾರ invoke ಮಾಡಲಾಗಿದ್ದು, ಸದರಿ ವಿಮಾ ಘಟಕಗಳಲ್ಲಿ ಮಾರ್ಗಸೂಚಿಯನ್ವಯ ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡ 25ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡಲಾಗುವುದು. ಅಂತಿಮವಾಗಿ ಬೆಳೆ ಕಟಾವು ಪ್ರಯೋಗಗಳ ಇಳುವರಿ ಆಧಾರದ ಮೇಲೆ ಬೆಳೆ ವಿಮೆ ಪರಿಹಾರ ಲೆಕ್ಕಾಚಾರ ಮಾಡಿ, ವ್ಯತ್ಯಾಸದ ಮೊತ್ತವನ್ನು ಅರ್ಹ ಫಲಾನುಭವಿಗಳಿಗೆ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗುತ್ತದೆ. |

| | | |
|---|---|---|
| | | ವಿಜಯಪುರ ಹಾಗೂ ಕಲಬುರಗಿ ಜಿಲ್ಲೆಗಳಿಂದ ಬಿತ್ತನೆ ವೈಫಲ್ಯ ಅಥವಾ ಮಧ್ಯಂತರ ವಿಮಾ ಪರಿಹಾರ invoke ಮಾಡಲು ಇಲ್ಲಿಯವರೆಗೂ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ.<br><br>ಕೊಪ್ಪಳ ಜಿಲ್ಲೆಯ 41 ವಿಮಾ ಘಟಕಗಳಲ್ಲಿ ಭತ್ತ (ನೀರಾವರಿ) ಬೆಳೆಗೆ ಬಿತ್ತನೆ ವೈಫಲ್ಯ (Prevented Sowing) ಹಾಗೂ 135 ವಿಮಾ ಘಟಕಗಳಲ್ಲಿ ಮಧ್ಯಂತರ ವಿಮಾ ಪರಿಹಾರ invoke ಮಾಡಲಾಗಿರುತ್ತದೆ.<br><br>ಕಂದಾಯ ಇಲಾಖೆ:<br>ಸರ್ಕಾರದಿಂದ ಬರಪೀಡಿತ ತಾಲ್ಲೂಕುಗಳ ಘೋಷಣೆಯಾದ ನಂತರ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಬೆಳೆ ಹಾನಿಯ ಕುರಿತು ಜಂಟಿ ಸಮೀಕ್ಷೆ ನಡೆಸಿ ನೀಡುವ ವರದಿಯ ಮೇರೆಗೆ ಜಿಲ್ಲಾಧಿಕಾರಿಗಳು ನಿಯಮಾನುಸಾರ ಪರಿಶೀಲನೆ ನಡೆಸಿ ನೀಡುವ ದೃಢೀಕರಣದ ಮೇರೆಗೆ ಕೇಂದ್ರ ಗೃಹ ಮಂತ್ರಾಲಯದ 11.07.2023 ಪ್ರಸ್ತುತ ಜಾರಿಯಲ್ಲಿರುವ ದಿ:11.07.2026ರ ಮಾರ್ಗಸೂಚಿಗಳ ಅನ್ವಯ ಮಳೆಯಾಶ್ರಿತ ಬೆಳೆಹಾನಿಗೆ ಹೆಕ್ಟೇರ್ 1ಕ್ಕೆ ರೂ.8,500/-, ನೀರಾವರಿ ಬೆಳೆಹಾನಿಗೆ ಹೆಕ್ಟೇರ್ 1ಕ್ಕೆ ರೂ.17,000/-ಮತ್ತು ಬಹುವಾರ್ಷಿಕ ಬೆಳೆಹಾನಿಗೆ ಹೆಕ್ಟೇರ್ 1ಕ್ಕೆ ರೂ.22,500/- ಗಳಂತೆ ಗರಿಷ್ಠ 2 ಹೆಕ್ಟೇರ್‌ಗೆ ಬೆಳೆಹಾನಿಯ ಇನ್ಪುಟ್ ಸಬ್ಸಿಡಿಯನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಡಿ.ಬಿ.ಟಿ. ಮುಖಾಂತರ ಪಾವತಿಸಲಾಗುವುದು. |

ಸಂಖ್ಯೆ: AGRI/218/ACT/2026

**(ಪಿ. ಎಂ. ನರೇಂದ್ರ ಸ್ವಾಮಿ)**
ಕೃಷಿ ಸಚಿವರು

**ಅನುಬಂಧ-I ಎಲ್.ಸಿ.ಕ್ರ 976(103)**

| 2026ನೇ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದ ರಸಗೊಬ್ಬರ ಬೇಡಿಕೆ, ಸರಬರಾಜು ಮತ್ತು ದಾಸ್ತಾನು ಪ್ರಮಾಣ (ಮೆ.ಟನ್ ಗಳಲ್ಲಿ) | | | | | |
|---|---|---|---|---|---|
| **ರಸಗೊಬ್ಬರದ ಗ್ರೇಡ್** | **ಮುಂಗಾರು-2026 ಬೇಡಿಕೆ (ಏಪ್ರಿಲ್-2026ರಿಂದ ಸೆಪ್ಟೆಂಬರ್‌ವರೆಗೆ)** | **ಬೇಡಿಕೆ (ಏಪ್ರಿಲ್ ರಿಂದ ಆಗಸ್ಟ್-2026))** | **ಸರಬರಾಜು (ಆರಂಭಿಕ ಶಿಲ್ಕು ಒಳಗೊಂಡಂತೆ)** | **ಮಾರಾಟ (20.08.26)** | **ಉಳಿಕೆ ದಾಸ್ತಾನು (20.08.26)** |
| ಡಿ.ಎ.ಪಿ | 400000 | 357303 | 410696 | 284803 | 125893 |
| ಎಮ್.ಒ.ಪಿ | 212000 | 173416 | 185440 | 97193 | 88247 |
| ಕಾಂಪ್ಲೆಕ್ಸ್ | 1188000 | 993947 | 1355932 | 853591 | 502341 |
| ಯೂರಿಯಾ | 1110000 | 913442 | 1101640 | 630761 | 470879 |
| ಎಸ್.ಎಸ್.ಪಿ | 95000 | 79664 | 83443 | 46590 | 36853 |
| **ಒಟ್ಟು** | **3005000** | **2517772** | **3137151** | **1912938** | **1224213** |

ಅನುಬಂಧ-2 ಎಲ್.ಸಿ.ಕ್ಯೂ 976(103)

## 2026ನೇ ಸಾಲಿನ ಮುಂಗಾರು ಹಂಗಾಮಿಗೆ ರಾಜ್ಯದ ರಸಗೊಬ್ಬರ ಬೇಡಿಕೆ, ಸರಬರಾಜು ಮತ್ತು ದಾಸ್ತಾನು ಪ್ರಮಾಣ (ಮೆ.ಟನ್ ಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಏಪ್ರಿಲ್-2026ರಿಂದ ಸೆಪ್ಟೆಂಬರ್-2026ರವರೆಗಿನ ಬೇಡಿಕೆ | ಏಪ್ರಿಲ್ ರಿಂದ ಆಗಸ್ಟ್- 2026 ರ ಮಾಹೆವರೆಗಿನ ಬೇಡಿಕೆ | ಆರಂಭಿಕ ಶಿಲ್ಕು(ದಿನಾಂಕ 1.04.2026 ರಂತೆ) | ಸರಬರಾಜು 20.08.2026 | ರಸಗೊಬ್ಬರ ಮಾರಾಟ | ಉಳಿಕೆ ದಾಸ್ತಾನು ಪ್ರಮಾಣ 20.08.2026 ರಂತೆ |
|---|---|---|---|---|---|---|---|
| 1 | ಬಾಗಲಕೋಟೆ | 117195 | 98003 | 39627 | 90347 | 76718 | 53256 |
| 2 | ಬೆಂಗಳೂರು ಗ್ರಾಮಾಂತರ | 36169 | 30511 | 24077 | 17517 | 23262 | 18332 |
| 3 | ಬೆಳಗಾವಿ | 250736 | 208953 | 109837 | 203340 | 166898 | 146279 |
| 4 | ಬಳ್ಳಾರಿ | 103778 | 87024 | 40467 | 100185 | 72882 | 67770 |
| 5 | ಬೆಂಗಳೂರು ನಗರ | 18278 | 15388 | 11202 | 22017 | 18926 | 14293 |
| 6 | ಬೀದರ್ | 43366 | 36779 | 14540 | 27541 | 27180 | 14901 |
| 7 | ವಿಜಯಪುರ | 127198 | 106718 | 72268 | 87860 | 87575 | 72553 |
| 8 | ಚಾಮರಾಜನಗರ | 53966 | 45127 | 15944 | 34826 | 32713 | 18057 |
| 9 | ಚಿಕ್ಕಬಳ್ಳಾಪುರ | 51781 | 43505 | 20759 | 30178 | 32521 | 18416 |
| 10 | ಚಿಕ್ಕಮಗಳೂರು | 156941 | 130876 | 57261 | 95120 | 101882 | 50499 |
| 11 | ಚಿತ್ರದುರ್ಗ | 76717 | 64511 | 21747 | 43773 | 47223 | 18297 |
| 12 | ದಕ್ಷಿಣ ಕನ್ನಡ | 23364 | 19395 | 14119 | 12545 | 11355 | 15309 |
| 13 | ದಾವಣಗೆರೆ | 163874 | 137012 | 86971 | 81032 | 106457 | 61546 |
| 14 | ಧಾರವಾಡ | 54648 | 46055 | 32146 | 33933 | 39461 | 26618 |
| 15 | ಗದಗ | 67536 | 56882 | 16647 | 47023 | 43510 | 20160 |
| 16 | ಕಲಬುರಗಿ | 99863 | 84827 | 36672 | 86266 | 76129 | 46809 |
| 17 | ಹಾಸನ | 164187 | 137192 | 66948 | 111203 | 115005 | 63146 |
| 18 | ಹಾವೇರಿ | 141874 | 119138 | 54972 | 88435 | 103097 | 40310 |
| 19 | ಕೊಡಗು | 98604 | 82315 | 40430 | 61170 | 68438 | 33162 |
| 20 | ಕೋಲಾರ | 40415 | 33876 | 14846 | 24805 | 24657 | 14994 |
| 21 | ಕೊಪ್ಪಳ | 117703 | 98702 | 31576 | 67788 | 57840 | 41524 |
| 22 | ಮಂಡ್ಯ | 84459 | 70233 | 39069 | 50023 | 45649 | 43443 |
| 23 | ಮೈಸೂರು | 114243 | 95622 | 67911 | 64679 | 74019 | 58571 |
| 24 | ರಾಯಚೂರು | 255173 | 214458 | 60333 | 169856 | 140389 | 89800 |
| 25 | ಬೆಂಗಳೂರು ದಕ್ಷಿಣ | 28287 | 23484 | 5604 | 17063 | 14805 | 7862 |
| 26 | ಶಿವಮೊಗ್ಗ | 105168 | 88060 | 49151 | 61068 | 65694 | 44525 |
| 27 | ತುಮಕೂರು | 76634 | 64030 | 36859 | 46706 | 50948 | 32617 |
| 28 | ಉಡುಪಿ | 10388 | 8640 | 4728 | 6710 | 6354 | 5084 |
| 29 | ಉತ್ತರ ಕನ್ನಡ | 36560 | 30580 | 10321 | 20909 | 21627 | 9603 |
| 30 | ವಿಜಯನಗರ | 133543 | 111946 | 23719 | 73290 | 69843 | 27166 |
| 31 | ಯಾದಗಿರಿ | 152352 | 127930 | 33330 | 105862 | 89881 | 49311 |
| | **ಒಟ್ಟು** | **3005000** | **2517772** | **1154081** | **1983070** | **1912938** | **1224213** |

ಅನುಬಂಧ-3

**GOVERNMENT OF KARNATAKA**

No:CKSDMA-DMA0ETC/198/2026-AD

Commissionerate Karnataka State Disaster Management Authority, Kandaya Bhavan, Bengaluru, dated: 14-08-2026

**NOTIFICATION FOR GROUND TRUTHING FOR KHARIF 2026 DROUGHT INTENSITY ASSESSMENT**

**Sub:** Cabinet Decision dated 13.08.2026 regarding conduct of Ground Truthing for drought assessment.

**Ref:**
1. Manual for Drought Management 2020
2. Operational Guidelines for Administration of the State Disaster Response Fund and National Disaster Response Fund vide letter dated 30th June 2026
3. Integrated Drought Assessment by KSNDMC as per the Manual for Drought Management, 2020 for the Period from 1st June to 12th August 2026

**Preamble**

As on 13th August 2026, the State has received 411 mm of rainfall against the normal rainfall of 579 mm, i.e., deficit of 29%. Rainfall has been deficit across all four meteorological regions of the State.

The temporal distribution of Southwest Monsoon rainfall has been highly erratic, characterised by prolonged dry spells interspersed with isolated episodes of heavy rainfall. The resultant rainfall deficit and consecutive dry spells have adversely affected agricultural operations, soil moisture availability, Kharif sowing and crop growth. In several areas, poor seed germination and crop establishment have been reported, while standing crops are exhibiting moisture stress, including wilting, yellowing/discolouration and stunted growth.

The Manual for Drought Management, 2020, issued by the Ministry of Agriculture & Farmers' Welfare, Government of India, prescribes an objective, transparent and evidence-based three-stage methodology for drought assessment and declaration, as follows:

Stage 1 – Mandatory Indicators:
The first drought trigger is assessed based on:
- Seasonal and cumulative rainfall deviation from normal; and
- Occurrence, duration and persistence of dry spells.

Stage 2 – Impact Indicators:
Upon activation of the first trigger, the following impact indicators are assessed:
- Sowing Progress: Deviation in area sown from normal, delayed sowing and crop establishment failure.
- Remote Sensing-based Vegetation Indices: NDVI/VCI and assessment of crop vigour and vegetation stress.

- Soil Moisture Indicators: Surface and root-zone soil moisture availability and adequacy for crop growth.
- Hydrological Indicators: Reservoir storage, groundwater levels, streamflow and surface water availability.

For assessment under Stage 2, the State may consider any three of the four categories of impact indicators and arrive at a considered assessment of the occurrence and severity of drought.

Stage 3 – Ground Truthing:
Where the second drought trigger is activated, sample-based Ground Truthing (GT) is undertaken through mobile application. The findings of the field verification are used for determining the intensity of drought as moderate or severe, based on the extent of crop loss.

Further, the Guidelines on Constitution and Administration of the SDRF and NDRF, referred at No.2 above, issued by the Government of India, stipulate that drought declaration and assessment of its severity shall be undertaken in accordance with the procedure prescribed in the Manual for Drought Management, 2020. Accordingly, all stages of drought assessment, including scientific assessment through prescribed indicators and mandatory field verification through Ground Truthing, are required to be undertaken in accordance with the provisions of the Manual.

As stipulated under Chapter 3.3 – Process for the Determination of Drought (Page 45) of the Manual for Drought Management, 2020, the Drought Monitoring Cell of the State, Karnataka State Natural Disaster Monitoring Centre (KSNDMC), is responsible for continuous monitoring of critical drought parameters and for apprising the State Government regarding the spread and severity of any emerging drought situation.

Accordingly, KSNDMC has carried out a scientific assessment of the drought parameters prescribed in the Manual for Drought Management, 2020 and submitted its assessment report for the time period from 1st June to 12th August to the State Government. As per the KSNDMC Integrated Drought Assessment, i.e., Trigger-1 (Mandatory Indicators) and Trigger-2 (Impact Indicators), total of 102 taluks has qualified for Step 3 – Ground Truthing. The list of taluks qualifying for Ground Truthing is enclosed as Annexure-1.

As prescribed in the Manual for Drought Management, 2020, Ground Truthing (GT) shall be conducted in 10% of the villages in each taluk that has qualified for Ground Truthing, with the villages being selected on a random basis. In each selected village, representative locations (approximately five sites for each major crop) shall be inspected for field data collection.

The Ground Truthing exercise is carried out using an exclusive "Crop Loss GT" Mobile Application developed by the DPAR (e-Governance). The application captures details of the crop and the extent of damage, geo-tagged photographs, GPS coordinates, land particulars, and ownership details, thereby ensuring transparency, accuracy, and uniformity in the assessment process.

Based on field verification, a GT qualified taluk shall qualify for declaration of drought if the estimated crop loss is 33% or more. Where the estimated crop loss exceeds 50%, the drought may be classified as Severe. The findings of the Ground Truthing exercise shall be final for determining the intensity of drought as Moderate or Severe. Further, where 80% or more of the Ground Truthing observations indicate crop loss exceeding 50%, the State Government has the option to upgrade the intensity of drought from Moderate to Severe, in accordance with the provisions of the Manual.

In view of the circumstances stated above, the schedule for conducting Ground Truthing (GT) in the taluks that have qualified for GT is as follows:

| Sl. No | Event | Date |
|---|---|---|
| 1 | Re-orientation on GT | 14-08-2026 |
| 2 | Selection of crops, Formation of GT teams and Randomization of GT villages | 14th to 17th August 2026 |
| 3 | GT verification at field | 18th to 20th August 2026 |
| 4 | Completion of GT and submission of Form 11 of GT village (Agriculture and Horticulture Department to Consolidate and collage Form 11) | 21st to 22nd August 2026 |

The Deputy Commissioners and Chairpersons of the District Disaster Management Authorities, shall scrupulously adhere to the procedure and instructions prescribed in the *Manual for Drought Management, 2020* and ensure strict compliance with the timelines specified above.

The taluks qualifying for Ground Truthing (GT) are identified based on the scientific assessment undertaken in accordance with the Manual for Drought Management, 2020, for the period from 1st June to 12th August 2026.

The assessment by KSNDMC will be conducted on a weekly basis until the end of the Kharif 2026 season, considering the likely deterioration in crop conditions in view of the forecast rainfall for the second half of August and September.

The weekly assessment of KSNDMC will be placed before the Cabinet for consideration and approval for conducting GT in the qualifying taluks. Accordingly, Ground Truthing will be treated as a continuous process and will be undertaken in taluks qualifying for GT based on the subsequent weekly assessments, until the end of the Kharif 2026 season.

**Enclosures:**

1. List of GT qualified taluks as provided by KSNDMC.
2. Form No. 11-Damage to Agriculture crop due to drought.
3. Excerpts from the Manual for Drought Management, 2020 pertaining to Ground Truthing.

Hemamba. S, IAS 14/8/26
Commissioner KSDMA,
Revenue Department (DM)

To:

1. All Deputy Commissioners cum Chairpersons of District Disaster Management Authority.

Copy to:

1. Chief Secretary to Government, Vidhana Soudha, Bengaluru.
2. Additional Chief Secretary and Development Commissioner, Vidhana Soudha, Bengaluru.
3. Additional Chief Secretary to Hon'ble Chief Minister, Vidhana Soudha, Bengaluru
4. Secretary to Government, Agriculture Department, MS Building, Bengaluru
5. Secretary to Government, Horticulture Department, MS Building, Bengaluru
6. Commissioner Agriculture, Seshadri Road, Bengaluru-with a request to attend the meeting at Room 122, Vikasa Soudha.
7. Director, KSNDMC, Bengaluru.
8. PS to Hon'ble Deputy Chief Minister-for kind information.

GoI:

1. Joint Secretary to Government of India, Ministry of Home Affairs, Disaster Management Division, New Delhi.
2. Joint Secretary to Government of India, Ministry of Agriculture and Farmers Welfare, (Disaster Management Division) New Delhi-For kind information.

KSNDMC ASSESSMENT

**NOTE ON TALUKS QUALIFIED UNDER THE INTEGRATED DROUGHT ASSESSMENT AS ON 12 AUGUST 2026**

As per the Government of India Manual for Drought Management, 2020, drought assessment is undertaken through Trigger-1 (Mandatory Indicators) followed by Trigger-2 (Impact Indicators). Under Trigger-1, rainfall deviation and dry spell conditions are assessed. The taluks qualifying under Trigger-1 are further assessed based on impact indicators including agriculture/crop sowing, remote sensing-based vegetation indices, soil moisture and groundwater indicators. The final drought category is determined through the integrated assessment of Trigger-1 and Trigger-2.

As on 12 August 2026, 121 taluks qualified under Trigger-1 (Mandatory Indicators). Based on the Integrated Drought Assessment (Trigger-1 + Trigger-2), 102 taluks across 25 districts qualified under the prescribed criteria. Of these, 57 taluks were classified as Severe and 45 taluks as Moderate.

In accordance with the prescribed in the Manual for Drought Management, 2020, Ground Truthing procedure, the Moderate/Severe drought affected taluks may be taken up for field level Ground Truth Verification to assess and verify the actual crop affected and drought impact on the ground. The district-wise list of the 102 qualified taluks is enclosed as Annexure-I.

The Ground Truth Verification shall be carried out as per the prescribed procedure and the observations shall be considered for further drought assessment.

**Annexure-I**

| Sl.No. | District | Taluk | Integrated Drought Assessment (Based on Trigger-1 and Trigger-2 Indicators) |
|---|---|---|---|
| 1 | Bengaluru Urban | Anekal | Severe |
| 2 | Bengaluru Urban | Bengaluru North | Severe |
| 3 | Bengaluru Urban | Bengaluru East | Severe |
| 4 | Bengaluru Urban | Yelahanka | Severe |
| 5 | Bengaluru Rural | Devanahalli | Moderate |
| 6 | Bengaluru Rural | Hosakote | Severe |
| 7 | Bengaluru Rural | Nelamangala | Severe |
| 8 | Bengaluru South | Magadi | Severe |
| 9 | Bengaluru South | Ramanagara | Severe |

| Sl.No. | District | Taluk | Integrated Drought Assessment (Based on Trigger-1 and Trigger-2 Indicators) |
|---|---|---|---|
| 10 | Kolar | Bangarapet | Severe |
| 11 | Kolar | Kolar | Moderate |
| 12 | Kolar | Malur | Severe |
| 13 | Kolar | Mulabagilu | Severe |
| 14 | Kolar | Srinivasapura | Severe |
| 15 | Kolar | Kgf | Moderate |
| 16 | Chikkaballapura | Bagepalli | Moderate |
| 17 | Chikkaballapura | Chikkaballapura | Severe |
| 18 | Chikkaballapura | Chintamani | Severe |
| 19 | Chikkaballapura | Gauribidanur | Severe |
| 20 | Chikkaballapura | Gudibanda | Moderate |
| 21 | Chikkaballapura | Sidlaghatta | Severe |
| 22 | Chikkaballapura | Cheluru | Severe |
| 23 | Chikkaballapura | Manchenahalli | Severe |
| 24 | Tumakuru | Chikkanayakanahalli | Severe |
| 25 | Tumakuru | Gubbi | Severe |
| 26 | Tumakuru | Koratagere | Severe |
| 27 | Tumakuru | Kunigal | Severe |
| 28 | Tumakuru | Madhugiri | Moderate |
| 29 | Tumakuru | Pavagada | Severe |
| 30 | Tumakuru | Sira | Severe |
| 31 | Tumakuru | Tumakuru | Severe |
| 32 | Tumakuru | Turuvekere | Severe |
| 33 | Chitradurga | Challakere | Moderate |
| 34 | Chitradurga | Hiriyur | Moderate |
| 35 | Chitradurga | Hosadurga | Severe |
| 36 | Davanagere | Channagiri | Severe |
| 37 | Davanagere | Davanagere | Moderate |
| 38 | Davanagere | Honnali | Moderate |
| 39 | Davanagere | Nyamati | Moderate |
| 40 | Chamarajanagara | Chamarajanagara | Severe |
| 41 | Chamarajanagara | Gundlupet | Severe |
| 42 | Chamarajanagara | Kollegal | Severe |
| 43 | Chamarajanagara | Yelandur | Severe |
| 44 | Chamarajanagara | Hanur | Severe |
| 45 | Mysuru | Heggadadevanakote | Moderate |
| 46 | Mysuru | Hunsur | Severe |
| 47 | Mysuru | Krishnarajanagar | Severe |

| Sl.No. | District | Taluk | Integrated Drought Assessment (Based on Trigger-1 and Trigger-2 Indicators) |
|---|---|---|---|
| 48 | Mysuru | Mysuru | Severe |
| 49 | Mysuru | Nanjanagud | Severe |
| 50 | Mysuru | T.Narasipura | Severe |
| 51 | Mysuru | Saraguru | Severe |
| 52 | Mysuru | Saligrama | Severe |
| 53 | Mandya | Krishnarajapet | Severe |
| 54 | Mandya | Maddur | Moderate |
| 55 | Mandya | Malavalli | Severe |
| 56 | Mandya | Mandya | Severe |
| 57 | Mandya | Nagamangala | Severe |
| 58 | Mandya | Pandavapura | Moderate |
| 59 | Mandya | Srirangapatna | Severe |
| 60 | Ballari | Ballari | Moderate |
| 61 | Ballari | Sandur | Moderate |
| 62 | Ballari | Kurugodu | Severe |
| 63 | Ballari | Kampli | Severe |
| 64 | Koppala | Gangavathi | Severe |
| 65 | Koppala | Kukanuru | Moderate |
| 66 | Koppala | Kanakagiri | Moderate |
| 67 | Raichur | Deodurga | Moderate |
| 68 | Raichur | Lingsugur | Moderate |
| 69 | Raichur | Raichur | Moderate |
| 70 | Raichur | Maski | Severe |
| 71 | Raichur | Arakera | Moderate |
| 72 | Bidar | Bidar | Moderate |
| 73 | Bidar | Basavakalyan | Moderate |
| 74 | Bidar | Humnabad | Moderate |
| 75 | Bidar | Chittaguppa | Moderate |
| 76 | Bagalkote | Bagalkote | Moderate |
| 77 | Bagalkote | Bilgi | Moderate |
| 78 | Bagalkote | Jamkhandi | Moderate |
| 79 | Bagalkote | Guledagudda | Severe |
| 80 | Bagalkote | Ilkal | Severe |
| 81 | Vijayapura | Vijayapura | Moderate |
| 82 | Vijayapura | Nidagundi | Moderate |
| 83 | Vijayapura | Kolhara | Moderate |
| 84 | Gadag | Gajendragad | Moderate |
| 85 | Shivamogga | Bhadravathi | Moderate |

| Sl.No. | District | Taluk | Integrated Drought Assessment (Based on Trigger-1 and Trigger-2 Indicators) |
|---|---|---|---|
| 86 | Hassan | Arkalgud | Moderate |
| 87 | Hassan | Arasikere | Severe |
| 88 | Hassan | Channarayapatna | Moderate |
| 89 | Hassan | Hassan | Moderate |
| 90 | Hassan | Holenarasipura | Moderate |
| 91 | Chikkamagaluru | Koppa | Moderate |
| 92 | Chikkamagaluru | Narasimharajapura | Moderate |
| 93 | Chikkamagaluru | Tarikere | Moderate |
| 94 | Chikkamagaluru | Ajjampura | Severe |
| 95 | Kodagu | Somwarpet | Moderate |
| 96 | Uttara Kannada | Mundgod | Moderate |
| 97 | Uttara Kannada | Yellapur | Moderate |
| 98 | Yadgir | Shahapur | Moderate |
| 99 | Vijayanagar | Hosapete | Severe |
| 100 | Vijayanagar | Hadagali | Severe |
| 101 | Vijayanagar | Hagaribommanahalli | Severe |
| 102 | Vijayanagar | Harappanahalli | Severe |

## Form No.11

## Damage to Agricultural Crops due to Drought

**Name of Village__________/Taluka/Tehsil/Block/Mandal/ ______District________**

| Crop | Normal sown area | Irrigated area | Actual sown area during the season | Crop Area (ha) | | | | Yield (ton/ha) | |
|---|---|---|---|---|---|---|---|---|---|
| | | | | Area unsown | Sown Area affected by drought | Sown Area with % crop loss between 33% and 50% | Sown Area with % crop loss above 50% | Standard/ Normal yield@ | Expected Yield# based on Eye Estimation |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

**@ Standard/Normal Yield:** Standard yield for the crop, in the corresponding drought declaration unit (District/Taluk/Block/GP etc.), is the average yield of best five years out of past seven years.

**# Expected Yield**: Expected Yield is to be estimated by eye survey by a team comprising of officers of Revenue, Agriculture, Relief/Disaster Departments of the State, experienced Agriculture Professional and farmers/ stakeholders.

applicable for the river systems having perennial flow characteristics. In case of intermittent and ephemeral flow characteristics, joint probability distribution approach is required to be used for estimation of truncation level. The SFDI suffers from limitation arising from the non-availability of historical data (30 years or more) which may sometimes result in erroneous assessment of stream-flow drought characteristics, particularly with regard to non snowfed river systems. States may consider installing stream gauging station-one for every 100sq km to help develop prognostic tools for understanding supply availability vis a vis demand.

### 3.2.5 Other Factors

The State Governments may further monitor socio-economic indicators such as the following factors in making a holistic evaluation of drought:-

- Extent of fodder supply and its prevailing prices compared to normal prices and information on cattle camps (see Forms 5 and 6, Annexure-1);
- Scarcity of drinking water supply (human and livestock) (see Forms 7 and 8, Annexure-1);
- Demand for employment on public works, and unusual outmigration of labour in search of employment (see Form 9, Annexure-1);
- Current agricultural and non-agricultural wages compared with normal times (see Form 9, Annexure-1);
- Supply of food grains, and price situation of essential commodities (see Form 10, Annexure-1).

These socio-economic indicators may aid State Governments in fine tuning the assessment of drought. However, State Governments will need to set up credible data bases and monitoring systems for objective evaluation of distress migration, price trends of fodder and food commodities, availability of drinking water etc.

### 3.2.6 Ground Truthing or Verification

The Ground Truthing shall be carried out only in case of districts/sub-districts where prescribed indices show moderate/severe drought conditions. It has to be conducted well before harvesting and as soon as the tigger 2 is set off.

The Ground Truthing (GT) must be conducted in each of the 10% of the drought affected villages, selected on a random basis. In each of the selected villages, representative locations (about 5 sites for each of the major crops), may be inspected for data collection. The GT shall preferably be conducted using a smart phone based App. The App shall record the GPS coordinates of the site and the photo of the state of crop, with the provision to upload these parameters on a computer server for archiving for postfacto analysis. Inspection of isolated and small fields (<1 acre) should be avoided to improve the quality of field data. The States may identify the relevant crop/field attribute data for the Mobile App.

Appropriate inspection protocols may be developed for providing guidance in collection of data. An estimation of crop damage / loss of 33% or more on the basis of field verification will qualify for the declaration of drought. However, for the drought to qualify as one of a 'severe' nature, the estimation of damage / loss to crops should be more than 50%. Form-11 at Annex-1 has been suggested for the compilation of village wise data on damage to sown crops.

It may be noted that this system of GT collection is objective based on technology and only for the purpose of declaration of drought. GT should not be confused with the traditional system of girdawari/paisewari/annewari etc., which are basically done for assessing the impact of drought and will be used for selection of beneficiaries.

# 3.3 PROCESS FOR THE DETERMINATION OF DROUGHT

The Drought Monitoring Cells (DMCs) in the States will monitor data regularly on various critical parameters and apprise the SEC/Disaster Management Department in the State Government on the spread and severity of an emerging drought like situation. The complexity of drought cannot be captured with the aid of a single indicator, but requires a more comprehensive understanding of data on several parameters read in conjunction with rainfall, the most important and mandatory parameter in any determination of drought and bolstered by a field verification. Table 3.12 sub para 3.3.1 below provides a simple matrix to help make an objective assessment of drought.

## 3.3.1 Steps in the Determination of Drought

Following steps are suggested for the determination of drought:

**Step 1:** Mandatory Indicators viz. RF deviation or SPI or Dry Spell will be considered as per matrix at Table 3.11 to assess if the first drought trigger is set off.

***Table 3.11:*** *Matrix for rainfall deviations and dry spells (Trigger-1)*

| | | |
|---|---|---|
| Deficit or scanty rf/SPI<-1 | Yes | Yes |
| Deficit or scanty rf/SPI<-1 | No | Yes if rainfall is scanty or SPI<-1.5, else No |
| Normal rf/SPI>-1 | Yes | Yes |
| Normal rf/SPI>-1 | No | No |

**Step 2:** In the event that the first drought trigger is set off in Step 1, the Impact Indicators will be examined as per the matrix at Table 3.12.

***Table 3.12:*** *Matrix for impact indicators (Trigger-2)*

| | | | | | | |
|---|---|---|---|---|---|---|
| Rainfall Indices | | Agriculture | Remote Sensing | Soil Moisture | Hydrology | |
| Rainfall Deviation (RFdev) or SPI | Dry Spell | Crop Area Sown | VCI or NDVI & NDWI Deviations | PASM / MAI | SFDI / RSI / GWDI | |
| | | | | | | |

The States may consider any three of the four types of the Impact Indicators (one from each) for assessment of drought, the severity of the calamity and make a judgement.

**Explanation :**

The severity of the drought will be contingent upon the values of at least three out of four Impact Indicators viz, Agriculture, Remote Sensing, Soil Moisture and Hydrology in the following manner:

- Severe drought: if at least two of the selected 3 impact indicators are in 'Severe' category and one is in 'Moderate' category.
- Moderate drought: if at least two of the selected 3 impact indicators are in 'Moderate' category.
- *Normal: for all other cases.*
- Trigger 2 will be set off in the event of a finding of 'severe' or 'moderate' drought.
- *The State has an option to reduce the drought category by one rank (i.e. Severe to Moderate) if the irrigation percentage of the administrative region (District/Taluk/Block/Mandal), for which drought is being declared is more than 75%. However, in such a situation of reduction of drought intensity from 'Moderate' to 'Normal', the State Government will still be required to conduct field verification as prescribed in Step 3 below.*

**Step 3:** In the event that trigger 2 is set off **(severe or moderate),** States will conduct sample survey for ground truthing as described at 3.2.6. The finding of field verification exercise (GT) will be final for judging the intensity of drought as 'severe' or 'moderate' depending on the crop loss.

In case, 80% of GT reveals crop loss of more than 50%, states have option to upgrade the intensity of drought from Moderate to Severe category.

The criteria for declaration of drought will be the same in case of consecutive droughts.